ಬೌರಿಂಗ್, ವಿಕ್ಟೋರಿಯಾ ಹಾಗೂ ಮೈಸೂರು ಕೆ.ಆರ್. ಆಸ್ಪತ್ರೆಗಳಲ್ಲಿರುವ ಕೊರತೆಗಳು

681 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೌರಿಂಗ್ - ವಿಕ್ಟೋರಿಯಾ ಹಾಗೂ ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಗಳಲ್ಲಿ ಇರುವ ರುಗ್ಮಾಲಯ (ವಾರ್ಡ್)ಗಳ ಸಂಖ್ಯೆ ಎಷ್ಟು?

ಆ) ಪ್ರತಿ ಆಸ್ಪತ್ರೆಗಳಿಗೆ ಬರುವ ರೋಗಿಗಳ ಸಂಖ್ಯೆ ಎಷ್ಟು?

ಇ) ಈ ಆಸ್ಪತ್ರೆಗಳಲ್ಲಿ ಯಾವ ಯಾವ ಕೊರತೆಗಳು ಇವೆ?

ಈ) ಸರ್ಕಾರಿ ವೈದ್ಯರುಗಳು ನರ್ಸಿಂಗ್ ಹೋಂಗೆ ಅನಧಿಕೃತವಾಗಿ ಹೋಗುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಡಾ|| ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿರುವ ರುಗ್ಮಾಲಯಗಳ ಸಂಖ್ಯೆ (ವಾರ್ಡ್) - 26

ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ವಾರ್ಡ್‌ಗಳ ಸಂಖ್ಯೆ - 53

ಕೆ.ಆರ್. ಆಸ್ಪತ್ರೆಯಲ್ಲಿರುವ ವಾರ್ಡ್‌ಗಳ ಸಂಖ್ಯೆ - 47

ಒಟ್ಟು **126**

ಆ) **ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ :**

ಪ್ರತಿದಿನ ಹೊರರೋಗಿಗಳ ಸಂಖ್ಯೆ ಸರಾಸರಿ - 752

ಪ್ರತಿದಿನ ಒಳರೋಗಿಗಳ ಸಂಖ್ಯೆ ಸರಾಸರಿ - 54

ವಿಕ್ಟೋರಿಯಾ ಆಸ್ಪತ್ರೆ :

ಪ್ರತಿದಿನ ಹೊಸರೋಗಿಗಳ ಸಂಖ್ಯೆ ಸರಾಸರಿ - 1200

ಪ್ರತಿದಿನ ಹಳೇರೋಗಿಗಳ ಸಂಖ್ಯೆ ಸರಾಸರಿ - 450

ಕೆ.ಆರ್. ಆಸ್ಪತ್ರೆ, ಮೈಸೂರು :

ಪ್ರತಿದಿನ ಒಳರೋಗಿಗಳ ಸಂಖ್ಯೆ ಸರಾಸರಿ - 63

ಪ್ರತಿದಿನ ಹೊರರೋಗಿಗಳ ಸಂಖ್ಯೆ ಸರಾಸರಿ - 1088

ಇ) ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಮತ್ತು ಕೆ.ಆರ್ ಆಸ್ಪತ್ರೆ, ಮೈಸೂರು ಇವುಗಳಲ್ಲಿ ವೈದ್ಯರುಗಳ ಶುಶ್ರೂಷಾ ಸಿಬ್ಬಂದಿ, ಗ್ರೂಪ್-ದಿ ನೌಕರರ ಕೊರತೆಯನ್ನು ಮಾಡಲಾಗುತ್ತಿದೆ.

ಅಂತೆಯೇ ಉಪಕರಣಗಳ ಕೊರತೆ ಇದೆಯಾದರೂ ಅವುಗಳನ್ನು ಖರೀದಿಸುವ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಅಂತೆಯೇ ಹಳೆಯ ಕಟ್ಟಡಗಳು ದುರಸ್ಥಿ ಕಾರ್ಯ ಪ್ರಗತಿಯಲ್ಲಿದೆ. ಮತ್ತು ಬೌರಿಂಗ್ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಹೊಸ ಬಹುಮಹಡಿಗಳ ಕಟ್ಟಡ ಅಸ್ತಿತ್ವಕ್ಕೆ ಬಂದಿವೆ.

ಈ) ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಖಾಸಗಿ ನರ್ಸಿಂಗ್ ಹೋಂಗಳ ನಿಯಂತ್ರಣ ಕಾಯಿದೆಯಲ್ಲಿ ಈ ಬಗ್ಗೆ ಸೂಕ್ತ ಅವಕಾಶ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶೌಚಾಲಯ ಹೊಂದಿಲ್ಲದ ಜಿಲ್ಲಾ ಪಂಚಾಯ್ತಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಸದಸ್ಯರು

682 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮನೆಗಳಲ್ಲಿ ಸ್ವಂತ ಶೌಚಾಲಯವನ್ನು ಹೊಂದಿಲ್ಲದ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯಿತಿ ಸದಸ್ಯರುಗಳ ಸಂಖ್ಯೆ ಎಷ್ಟು?*

ಆ) *ಶೌಚಾಲಯವನ್ನು ಹೊಂದಿಲ್ಲದ ಸದಸ್ಯರ ಸದಸ್ಯತ್ವವನ್ನು ರದ್ದುಪಡಿಸದಿರಲು ಮಸೂದೆಗೆ ತಿದ್ದುಪಡಿಯನ್ನು ತರಲು ಸರ್ಕಾರದವರು ಕ್ರಮಕೈಗೊಳ್ಳುವರೆ?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಜಿಲ್ಲಾ ಪಂಚಾಯ್ತಿ - 160

ತಾಲ್ಲೂಕು ಪಂಚಾಯ್ತಿ - 1048

ಗ್ರಾಮ ಪಂಚಾಯ್ತಿ - 43,368

ಆ) ಕಾಲಾವಕಾಶ ವಿಸ್ತರಿಸುವ ಬಗ್ಗೆ ಪರಿಶೀಲಿಸಲಾಗುವುದು.

ಬೆಂಗಳೂರಿನಲ್ಲಿ ಆಸ್ಪತ್ರೆಗಳು ಹೊರ ಹಾಕುವ ತ್ಯಾಜ್ಯ ವಸ್ತುಗಳ ನಿರ್ವಹಣೆ

685- ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕದಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ಆಸ್ಪತ್ರೆಗಳು ಹೊರಹಾಕುವ ತ್ಯಾಜ್ಯ ವಸ್ತುಗಳನ್ನು ನಾಶಪಡಿಸುವುದರ ಬಗ್ಗೆ ಹಾಗೂ ಈ ತ್ಯಾಜ್ಯ ವಸ್ತುಗಳ ಸಮಗ್ರ ನಿರ್ವಹಣೆ ಯೋಜನೆಯನ್ನೇನಾದರೂ ರೂಪಿಸಲಾಗಿದೆಯೇ?*

ಆ) *ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರವು ಇದರ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು?*